Breach of the T. B. Left Bank Channel

ಶ್ರೀ ಎ. ಶರಣಪ್ಪ.—ರಾಯಚೂರು ಜಿಲ್ಲೆ ಪ್ರದೇಶಕ್ಕೆ ನೀರನ್ನೊದಗಿಸುವ ತುಂಗಭದ್ರ ಎಡ ದಂಡೆನಾಲೆ ಅನೇಕ ಸಲ ಒಡೆದುಹೋಗುತ್ತಿದೆ, ಈಗ 7ನೆಯ ಸಲ ಬ್ರೀಚ್ ಆಗಿದೆ. ಇದರಿಂದಾಗಿ ಆ ಕಡೆ ನೀರಾವರಿಗೆ ತೊಂದರೆಯಾಗಿದೆ. ಸರಕಾರ ಇದರ ಬಗ್ಗೆ ಏನು ಕ್ರಮ ಕೈಕೊಂಡಿದೆಯೆಂಬುದನ್ನು ಹೇಳಬೇಕು. ಸರಕಾರಕ್ಕೆ ಸಾಕಷ್ಟು ಪತ್ರ ಬಂದಿವೆ.

ಅಧ್ಯಕ್ಷರು.—ನೋಟಿಸನ್ನು ಕಳಿಸಿ.

Failure of rains and loss of crops in the State

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಯು ಪ್ರಾರಂಭವಾದಲ್ಲಿಂದ ನಾವು ರಾಜ್ಯದಲ್ಲಿರುವ ರುತುಮಾನ ಪರಿಸ್ಥಿತಿಯನ್ನು ಚರ್ಚೆಮಾಡಿದ್ದೇವೆ. ಮಂತ್ರಿಗಳು ಈ ಸಭೆಗೆ ಉತ್ತರ ಕೊಟ್ಟಿದ್ದಾರೆ. ಈ ಸಂಬಂಧದಲ್ಲಿ ಕೆಲಸಗಳು ಪ್ರಾರಂಭವಾಗಿವೆಯೇ ಎಂದು ಅಧಿಕಾರಿಗಳಿಂದಿಗೆ ಬೆಳಿಗ್ಗೆ ಫೋನಿನಲ್ಲಿ ಕೇಳಿದೆ. ಕಳೆದ ಒಂದು ವರ್ಷದಿಂದೀಚೆಗೆ ಮಳೆ ಸರಿಯಾಗಿ ಬಾರದೆ ತೊಂದರೆಯಾಗಿದೆ. ಡಿ.ಸಿ. ಯವರು ಟೂರ್ ಮಾಡಿ ಇದನ್ನು ಪರಿಶೀಲಿಸಿದ್ದಾರೆ. ಈ ಸಂಬಂಧದಲ್ಲಿ ಕೆಲಸ ಪ್ರಾರಂಭವಾಗುವ ಬಗ್ಗೆ ಮುಖ್ಯಮಂತ್ರಿಗಳು ನಿರ್ದಿಷ್ಟವಾಗಿ ಉತ್ತರ ಕೊಟ್ಟರು. ಪೀಸ್ ವರ್ಕ್‌ನಲ್ಲಿ ಸ್ಥಳೀಯ ಜನರಿಗೆ ಕೆಲಸ ಕೊಟ್ಟು ಮಾಡಿಸುತ್ತೇವೆಂದು ಸ್ಪಷ್ಟವಾಗಿ ಈ ಸಭೆಯಲ್ಲಿ ಹೇಳಿದರು. 12ನೆಯ ತಾರೀಖು ಈ ಅಧಿವೇಶನ ಪ್ರಾರಂಭವಾಯಿತು. ಇಂದು 27ನೆಯ ತಾರೀಖು. ಸರಕಾರ ಹೇಳಿಕೆ ಕೊಟ್ಟಮೇಲೆ 15 ದಿವಸಗಳು ಏನು ಕಾರ್ಯಕ್ರಮ ಕೈಕೊಂಡಿದೆ ? ಹಳೆಯ ಮೈಸೂರು ಭಾಗದಲ್ಲಿ ಮಳೆಯಿಲ್ಲದೆ ಹೆಚ್ಚು ತೊಂದರೆಯಾಗಿದೆ.

ಅಧ್ಯಕ್ಷರು.—ಎಷ್ಟು ತಿಂಗಳಿಂದೆ ಮಾನ್ಯ ಸದಸ್ಯರು ಹೇಳುವುದು ?

Failure of rains and loss of crops in the State.

ಶ್ರೀ ಎಚ್. ಡಿ. ದೇವೇಗೌಡ.—ನಾಲ್ಕೈದು ತಿಂಗಳಿಂದ ಮೊದಲನೆಯ ಬೆಳೆ ಸಂಪೂರ್ಣವಾಗಿ ಹೋಗಿದೆ, ಎರಡನೆಯ ಬೆಳೆ ಕೂಡ ಒಣಗಿಹೋಗಿದೆ. ಈ ದಿವಸ ಒಂದು ಕೆಲಸ ಕೂಡ ಪ್ರಾರಂಭಿಸಿಲ್ಲ. ಬಜೆಟ್ ಕೆಲಸಕ್ಕೆ ಕೂಡ ಒಂದು ಕಾಸೂ ಬಂದಿಲ್ಲ, ಹೆಚ್ಚು ಖರ್ಚುಮಾಡಬಾರದೆಂದು ನಿರ್ದೇಶ ಬಂದಿದೆ ಎಂದು ಹೇಳುತ್ತಿದ್ದಾರೆ. ಒಂದು ಕೆರೆಗೆ ಬಜೆಟ್ಟಿನಲ್ಲಿ 5 ಸಾವಿರ ರೂಪಾಯಿಗಳ ಟೋಕನ್ ಗ್ರಾಂಟಿದೆ, ಒಂದು ರಸ್ತೆಗೆ 2–3 ಸಾವಿರ ರೂಪಾಯಿಗಳ ಟೋಕನ್ ಗ್ರಾಂಟಿದೆ. ಅದಕ್ಕಿಂತ ಹೆಚ್ಚು ಖರ್ಚು ಮಾಡಬಾರದು ಎಂದು ಹೇಳಿದ್ದಾರೆ. ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ತೊಂದರೆಯಾಗಿದೆ ಎಂದು ನೋಡಿ ಮಂತ್ರಿಗಳು ತಕ್ಕ ವ್ಯವಸ್ಥೆಮಾಡಿಲ್ಲ. ಬಜೆಟ್ ಕೆಲಸವೆಷ್ಟು ಕೈಕೊಳ್ಳಲಾಗಿದೆ, ಬಜೆಟ್ ಕೆಲಸವಲ್ಲದೆ ಎಷ್ಟು ಕೈಕೊಂಡಿದೆ, ಯಾವ ಯಾವ ಪ್ರದೇಶಗಳನ್ನು ನೋಡಿ ವ್ಯವಸ್ಥೆ ಮಾಡಿದೆ ಎಂಬುದನ್ನು ಹೇಳಬೇಕು. ನಾರ್ಮಲ್ ಗ್ರಾಂಟೆಷ್ಟು ಮತ್ತು ಪೀಸ್‌ವರ್ಕ್ ಎಷ್ಟು ಮಾಡಿದೆ ಎಂಬುದನ್ನು ಕೂಡಲೆ ಸಭೆಗೆ ತಿಳಿಸಬೇಕು.

ಶ್ರೀ ಕೆ. ಎಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಮಾಡುತ್ತಿರುವುದು ಅತ್ತ ಅವರಿಗೆ ಹಣ ಖರ್ಚಾದಹಾಗೆ ಇರಬಾರದು, ಇತ್ತ ಜನರಿಗೆ ಕೆಲಸ ಆದಹಾಗೆ ಇರಬಾರದು ಅನ್ನುತಕ್ಕ ರೀತಿ ಕೇಸುಗಳನ್ನು ನಡೆಸುತ್ತಿದ್ದಾರೆ. ಒಂದು ಹೋಬಳಿಯಲ್ಲಿ ಅನೇಕ ಗ್ರಾಮುಗಳಿರುತ್ತವೆ. ಅಲ್ಲಿಗೆ ಒಬ್ಬ ಸೂಪರ್‌ವೈಜರನ್ನು ಇಟ್ಟರೆ ಕೆಲಸಗಳಾಗುತ್ತವೆಯೇ ? ಮಾನ್ಯ ಅಧ್ಯಕ್ಷರೇ, ತಾವು ತಮ್ಮ ಗ್ರಾಮದ ಕಡೆ ಇತ್ತೀಚೆಗೆ ಹೋದಂತೆ ಕಾಣುವುದಿಲ್ಲ. ಅಲ್ಲಿ ಕೂಡ ಮಳೆ ಸಂಪೂರ್ಣವಾಗಿ ಒಂದು ವಾರದಿಂದ ಬಾರದೆ ಪೈರುಗಳೆಲ್ಲಾ ಒಣಗುತ್ತಿವೆ. ಜನರಿಗೆ ಕೂಲಿ ಸಿಕ್ಕುತ್ತಿದ್ದ ಆ ನಾರ್ಮಲ್ 64 ಫಾಮಿನ್ ರಿಲೀಫ್ ಕಾಮಗಾರಿಗಳನ್ನೂ ಕೂಡ ನಿಲ್ಲಿಸಿದ್ದಾರೆ. ಜನರಿಗೆ ಕುಡಿಯುವ ನೀರಿನ ತೊಂದರೆ ಇನ್ನೂ ತಪ್ಪಲಿಲ್ಲ. ಒಂದೊಂದು ಊರಲ್ಲಿ ಬೋರ್‌ವೆಲ್ಲನ್ನು ಹಾಕಿ ನೀರು ಬಾರದೆ ಇದ್ದಾಗ್ಗೂ ಅದನ್ನು ಅಷ್ಟಕ್ಕೇ ಕೈಬಿಟ್ಟು ಅವರು ಅಲ್ಲಿಂದ ಹೊರಟುಹೋಗಿದ್ದಾರೆ. ಅವರ ಪತ್ತೆಯೇ ಇಲ್ಲ. ಅನೇಕ ಗ್ರಾಮಗಳಲ್ಲಿ ಬೇರೆ ವೆಲ್ಲುಗಳು ಫೈಲಾಗಿವೆ.

ಶ್ರೀ ನೂಲ ವಿರುಪಾಕ್ಷಪ್ಪ ಬಸಪ್ಪ (ಹುಕ್ಕೇರಿ).—ನಮ್ಮ ಕ್ಷೇತ್ರದಲ್ಲಿ ಜನ ಜಾನುವಾರುಗಳಿಗೆ ಕುಡಿಯಲಿಕ್ಕೆ ನೀರಿಲ್ಲ. ಹಾಲಿನ ಮೈಲು ದೂರದಿಂದ ನೀರನ್ನು ತರಲಾಗುತ್ತಿದೆ. ಈ ಅಂಶವನ್ನು ಮಾನ್ಯ ಆರೋಗ್ಯ ಸಚಿವರು ಕಣ್ಣಾರೆ ಕಂಡಿದ್ದಾರೆ. ಕಳೆದ ನಾಲ್ಕು ತಿಂಗಳಿಂದ ಅಲ್ಲಿ ಮಳೆಯಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಮಳೆಯಿಲ್ಲದೆ ಏನಾಗಿದೆ ಎಂಬುದರ ಬಗ್ಗೆ ತಮ್ಮ ಕಳವಳವನ್ನು ತಿಳಿಸುತ್ತಿದ್ದಾರೆ. ಅದಕ್ಕೆ ವಿವರಗಳನ್ನು ತಿಳಿಸಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ಸರ್ಕಾರಕ್ಕೇನೂ ಅಡ್ಡಿಯಿಲ್ಲ. ಆದರೆ ವಿಷಯಗಳನ್ನು ಕರಾರುವಾಕ್ಕಾಗಿ ತರಿಸಿ ಕೊಡಲು ನನಗೆ 2—3 ದಿನಗಳ ಕಾಲಾವಕಾಶಬೇಕು, ಅಷ್ಟೇ.

ಶ್ರೀ ಎಚ್. ಡಿ. ದೇವೇಗೌಡ.—ಸರ್ಕಾರದವರು ಈ ವಿಚಾರದಲ್ಲಿ ಒಂದು ತಂತಿಯನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗೆ ಕಳುಹಿಸಿದರೆ ತಕ್ಷಣ ವಿವರಗಳು ದೊರೆಯುತ್ತವೆ. ರಾಜ್ಯದಲ್ಲಿ ಯಾವ ಯಾವ ಪಾಕಟ್ಟಿನಲ್ಲಿ ಏನೇನು ತೊಂದರೆಯುಂಟಾಗಿದೆ ಎಂಬುದನ್ನು ತಿಳಿದುಕೊಳ್ಳಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರದವರಲ್ಲಿ ಈಗಾಗಲೇ ಕೆಲವು ಮಾಹಿತಿಗಳಿವೆ. ಆದರೆ ಇನ್ನೂ ಕೆಲವು ವಿವರಗಳು ಕರಾರುವಾಕ್ಕಾಗಿ ಬೇಕಾಗಿವೆ. ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಒಂದು ವಿವರ ಬೇಕಾದರೆ ಅದಕ್ಕೆ ಇನ್ನೂ ಸ್ವಲ್ಪ ಹೆಚ್ಚು ಕಾಲ ಬೇಕಾಗುವುದು. ಹಳೇ ಮೈಸೂರು ವಿಭಾಗಕ್ಕೆ ನಾನು ಸಂಬಂಧಪಟ್ಟಂತೆ ಒಂದು ಹೇಳಿಕೆಯನ್ನು ನಾಡಿದ್ದು ಸಭೆಗೆ ಕೊಡುತ್ತೇನೆ.

ಶ್ರೀ ನೂಲ ವಿರುಪಾಕ್ಷಪ್ಪ ಬಸಪ್ಪ.—ನಾನು ಹೇಳಿದ ವಿಚಾರವೇನಾಯಿತು ಸ್ವಾಮಿ ?

ಶ್ರೀ ಸಿ. ಬೈರೇಗೌಡ.—ನಮ್ಮ ಕೋಲಾರದ ಬಗ್ಗೆ ಕೂಡ ವರದಿ ತರಿಸಬೇಕು... ..

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರಕ್ಕೆ ಎಲ್ಲೆಲ್ಲಿಂದ ವರದಿಗಳು ಬರುತ್ತವೆಯೋ ಆ ಎಲ್ಲವನ್ನೂ ಸಭೆಗೆ ತಿಳಿಸುವುದಕ್ಕೆ ನನ್ನ ಅಡ್ಡಿಯಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರು, ಜನರ ಕಷ್ಟಕಾರ್ಪಣ್ಯಗಳನ್ನು ಇಲ್ಲಿ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲು ಎರಡು ನಿಮಿಷಗಳನ್ನು ತೆಗೆದುಕೊಂಡರೆ ಅದನ್ನು ಒಂದು ಅಪರಾಧ ಎಂದು ಭಾವಿಸಬಾರದು.....

ಅಧ್ಯಕ್ಷರು.—ಸರ್ಕಾರದವರು ಇಲ್ಲಿ ಸ್ಟೇಟ್‌ಮೆಂಟ್ ಮಾಡಿದ ನಂತರ ಮಾನ್ಯ ಸದಸ್ಯರು ಕ್ಲಾರಿಫಿಕೇಷನ್ ಬೇಕಾದರೆ ಕೇಳಬಹುದು ಅವರಿಗೆ ಅವಕಾಶ ಇರುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ರಾಜ್ಯದಲ್ಲಿ ಕೇವಲ ಅನಾವೃಷ್ಟಿಯಿಂದ ಮಾತ್ರವಲ್ಲದೆ ಅತಿವೃಷ್ಟಿಯಿಂದಲೂ ಸಾಕಷ್ಟು ರೈತರಿಗೆ ನಷ್ಟವಾಗಿದೆ. ಆದುದರಿಂದ ಚಿಕ್ಕಮಗಳೂರು, ಶಿವಮೊಗ್ಗ, ಕಾರವಾರ ಈ ಜಿಲ್ಲೆಗಳಲ್ಲಿ ಮಳೆ ವಿಶೇಷವಾಗಿ ಬಂದು ಫ್ಯೂರೆಲ್ಲಾ ಕೊಳೆತು ಜನರಿಗೆ ಬಹಳ ತೊಂದರೆ ಆಗಿದೆ. ಆದುದರಿಂದ ಅಲ್ಲಿ ಕೂಡ ಪರಿಹಾರಕಾರ್ಯಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರಕ್ಕೆ ಎಲ್ಲಾ ವಿಚಾರಗಳೂ ಗೊತ್ತಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಈಗ ಬೆಂಗಳೂರು ವಿಶ್ವವಿದ್ಯಾನಿಲಯದ ಬಗ್ಗೆ ಅಲ್ಲಿ ಏನೇನು ಅನಾಹುತಗಳಾಗುತ್ತಿದೆ ಎಂಬ ಬಗ್ಗೆ ಈ ದಿವಸದ ಪತ್ರಿಕೆಯಲ್ಲಿ ಬೇರೆ ವರದಿಗಳು ಬಂದಿವೆ. ಈ ವಿಚಾರದಲ್ಲಿ ನಾವೆಲ್ಲರೂ ಸೇರಿ ಇಲ್ಲಿ ಒಂದು ಕಾಲ್‌ಅಟೆನ್‌ಷನ್ ನೋಟೀಸನ್ನು ಕಳುಹಿಸಿದ್ದೇವೆ.....

ಶ್ರೀ ಎಚ್. ಡಿ. ದೇವೇಗೌಡ.—ನಾಳೆ ಅದರ ಬಗ್ಗೆ ಸಭೆಯಲ್ಲಿ ಚರ್ಚೆ ಇದೆ.

ಶ್ರೀ ಕೋಣಂದೂರು ಲಿಂಗಪ್ಪ.—ಇನ್ನು ಆ ಸಂಡೂರು ವಿಚಾರಣೆ ಬಗ್ಗೆ ಕಮೀಷನರ ವರದಿ ಬಂದಿದೆ.

ಅಧ್ಯಕ್ಷರು.—ಅದನ್ನು ಈಗ ಇಲ್ಲಿ ಚರ್ಚೆ ಮಾಡುವುದಕ್ಕೆ ಹೇಗೆ ಬರುತ್ತದೆ ?

ಶ್ರೀ ಎಚ್. ಡಿ. ದೇವೇಗೌಡ.—ಆ ಹೇಳಿಕೆಯ ಬಗ್ಗೆಯೂ ಇಲ್ಲಿ ಚರ್ಚೆಗೆ ಅವಕಾಶ ಇರಬೇಕು. ನಾನು ಪೊನ್ನೆ ಒಂದು ಪ್ರಿವಿಲೇಜ್ ಮೇಷನ್ ಬಗ್ಗೆ ನೋಟೀಸ್ ಕೊಟ್ಟಿದ್ದ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಮಾಡುವುದಾಗಿ ಹೇಳಿದ್ದರು. ಆದರೆ ಈಗ ಅವರ ಎಲ್ಲ ಕಾರ್ಯಗಳನ್ನೂ ಮಾನ್ಯ ಚನ್ನಬಸಪ್ಪನವರೇ ನಿರ್ವಹಿಸುತ್ತಿರುವುದರಿಂದ ಇದನ್ನು ಮಾಡುತ್ತಾರೆಯೇ ಏನು ಎಂಬ ವಿವರಣೆ ಅವರಿಂದ ಬೇಕಾಗಿದೆ.

ಅಧ್ಯಕ್ಷರು.—ಮುಖ್ಯಮಂತ್ರಿಗಳು ಬರಲಿ— ನೋಡೋಣ.